[Govt. of Karnataka C.R.P. 67]

| Deposition Sheets (RP.No.57) Form No.4 (Civil) | IN THE COURT OF CIVIL JUDGE & J.M.F.C., KARKALA. |
|---|---|

Criminal Case No. 328-2007

.................................................Vs...................................

ಸಾಕ್ಷಿದಾರನ ಹೆಸರು ಃ ಪುಟ್ಟೇಗೌಡ

ತಂದೆಯ ಹೆಸರುಃ ಅಂಬೇಗೌಡ ಪಿ.ಡಬ್ಲ್ಯೂಃ 4

ಪ್ರಾಯ ಃ 58 ವರ್ಷ

ಉದ್ಯೋಗ ಃ ಎ ಎಸ್ ಐ, ಕಾರ್ಕಳ ಗ್ರಾಮಾಂತರ ಠಾಣೆ

ವಾಸ ಃ ಕಾರ್ಕಳ

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು. ದಿಃ 10-12-2020.

**ದಂ ಪ್ರ ಸಂ ಕಲಂ 299 ರಡಿಯಲ್ಲಿ ಸಾಕ್ಷಿಯ ಹೇಳಿಕೆಃ**

ನಾನು 2009 ರಿಂದ 2014 ರವರೆಗೆ ನಾನು ಕಾರ್ಕಳ ನಗರ ಪೋಲಿಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 06-09-2011 ರಂದು ಬೆಂಗಳೂರು ತ್ಯಾಗರಾಜ ನಗರ, ನಾಗಸಂದ್ರ ವೃತ್ತ, ಬೈರಪುರ ಬ್ಲಾಕ್, 2 ನೇ ಮುಖ್ಯ 1 ನೇ ಅಡ್ಡ ರಸ್ತೆ, ಎಂಬಲ್ಲಿಗೆ ಹೋಗಿ ಆರೋಪಿ ಶೋಭಾ ಗೌಡ, ತಂದೆಃ ಬೋರಯ್ಯ ಗೌಡ ಇವರ ಬಗ್ಗೆ ವಿಚಾರಿಸಿರುತ್ತೇನೆ. ನಂತರ ಸ್ಥಳದಲ್ಲಿ ಸದರಿ ಆರೋಪಿಯ ಬಗ್ಗೆ ಮಾಹಿತಿ ಸಿಕ್ಕಿದ್ದಲ್ಲಿ ಪ್ರಕರಣ ಸಂಃ 328/07 ಮಾನ್ಯ ನ್ಯಾಯಾಲಯ, ಕಾರ್ಕಳ ಇಲ್ಲಿಗೆ ಹಾಜರುಪಡಿಸುವಂತೆ ಪಂಚರ ಸಮಕ್ಷಮ ಮಹಜರು ಮಾಡಿ ಟಾಂ ಟಾಂ ಮಾಡಿಸಿರುತ್ತೇನೆ. ಬಾತ್ಮಿದಾರರಿಗೆ ಪಂಚರಿಗೆ ಸಹಕರಿಸುವಂತೆ ಕೇಳಿಕೊಂಡ ಮೇರೆಗೆ ಪಂಚನಾಮೆಗೆ ಸಹಕರಿಸಿರುತ್ತಾರೆ.

ಮಹಜರಿನ ಒಂದು ಪ್ರತಿಯನ್ನು ತ್ಯಾಗರಾಜ ನಗರ ಬಸ್ಸು ನಿಲ್ದಾಣದಲ್ಲಿ, ಮತ್ತೊಂದನ್ನು ಆರೋಪಿ ವಾಸವಿದ್ದ ಮನೆಯ ಬಾಗಿಲಿಗೆ, ಇನ್ನೊಂದನ್ನು ಬಿಬಿಎಂಪಿ ಕಚೇರಿಯ ನೋಟಿಸು

ಬೋರ್ಡಿಗೆ ಅಂಟಿಸಿರುತ್ತೇನೆ. ಸದರಿ ಮಹಜರನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-4 ಎಂದು, ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ಆರೋಪಿಯು ತಲೆಮರೆಸಿಕೊಂಡಿದ್ದು, ಪಾಟೀ ಸವಾಲು ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ. ಮತ್ತು ಪ್ರ.ದ.ನ್ಯಾ.ದಂ., ಕಾರ್ಕಳ